# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 242 (224) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17/02/2022 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇಲ್ಲಿಯವರೆಗೆ ಕಾರ್ಮಿಕರ ವಂತಿಕೆಯಿಂದ ಸಂಗ್ರಹವಾಗಿರುವ ನಿಧಿಯ ಮೊತ್ತವೆಷ್ಟು; ಈ ನಿಧಿಯನ್ನು ಯಾವ ಸಂಸ್ಥೆ ನಿರ್ವಹಣೆ ಮಾಡುತ್ತಿದೆ; (ವಿವರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವಿವಿಧ ಮಂಡಳಿಗಳಲ್ಲಿ ಕಾರ್ಮಿಕರ ವಂತಿಗೆಯಿಂದ ಸಂಗ್ರಹಗೊಂಡಿರುವ ನಿಧಿಯ ವಿವರಗಳು ಈ ಕೆಳಕಂಡಂತಿವೆ.<br>**1) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಈ ಮಂಡಳಿಯ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಫಲಾನುಭವಿಗಳಾಗಿ ನೋಂದಾಯಿಸಲು ಹಾಗೂ ನವೀಕರಿಸಲು ನೋಂದಣಿ ಮತ್ತು ಸದಸ್ಯತ್ವ ವಂತಿಕೆಯನ್ನು ಪಡೆಯುತ್ತಿದ್ದು, ದಿನಾಂಕ 26-08-2020 ರವರೆಗೆ ರೂ. 39.76 ಕೋಟಿ ಮೊತ್ತವನ್ನು ಸಂಗ್ರಹ ಮಾಡಲಾಗಿರುತ್ತದೆ. ಈ ನಿಧಿಯನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಲ್ಯಾಣ ಮಂಡಳಿಯು ನಿರ್ವಹಣೆ ಮಾಡುತ್ತಿದೆ.<br>**2) ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ**<br>ಈ ಮಂಡಳಿಗೆ ಕಾರ್ಮಿಕ ಮತ್ತು ಮಾಲೀಕರು 20:40 ರ ಅನುಪಾತದಲ್ಲಿ ಪ್ರತಿ ಒಬ್ಬ ಕಾರ್ಮಿಕರಿಂದ ರೂ 20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ 40/- ರಂತೆ ವಂತಿಕೆಯನ್ನು ವರ್ಷಕ್ಕೆ ಒಂದು ಬಾರಿ ಪಾವತಿ ಮಾಡುತ್ತಿದ್ದು, ಹಾಗೂ ರೂ. 20/- ರಂತೆ ಪ್ರತಿ ಕಾರ್ಮಿಕರಿಂದ ವಂತಿಕೆಯನ್ನು ಮಂಡಳಿಯಲ್ಲಿ ಸ್ವೀಕರಿಸಲಾಗುತ್ತದೆ. ಇದುವರೆಗೂ ಮಂಡಳಿಯಲ್ಲಿ ಕಾರ್ಮಿಕ ಕಲ್ಯಾಣ ನಿಧಿ ರೂ.193.23 ಕೋಟಿಗಳು ಸಂಗ್ರಹವಾಗಿರುತ್ತದೆ. ಸದರಿ ನಿಧಿಯನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯೇ ನಿರ್ವಹಣೆ ಮಾಡುತ್ತಿದೆ. |

| | | |
|---|---|---|
| ಆ) | ಈ ನಿಧಿಯಿಂದ ಕಾರ್ಮಿಕ ವರ್ಗಕ್ಕೆ ಕಲ್ಪಿಸುತ್ತಿರುವ ಅಭಿವೃದ್ಧಿ ಯೋಜನೆಗಳು ಯಾವುವು: ಈ ಯೋಜನೆಗಳಿಗಾಗಿ ಇಲ್ಲಿಯವರೆಗೆ ಖರ್ಚಾಗಿರುವ ಮೊತ್ತವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು) | **1) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br><br>ಎಲ್ಲಾ ನಿರ್ಮಾಣ ಕಾಮಗಾರಿಯ ನಿರ್ಮಾಣ ವೆಚ್ಚದ ಮೇಲೆ ಶೇ.1 ರಂತೆ ಸುಂಕವನ್ನು ಸಂಗ್ರಹಿಸಲಾಗುತ್ತಿದ್ದು. ಹೀಗೆ ಸಂಗ್ರಹವಾಗುತ್ತಿರುವ ಸುಂಕವನ್ನು ಮಂಡಳಿಯ ಸುಂಕ ನಿಧಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವಿವಿಧ 19 ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಈ ವಿವಿಧ ಸೌಲಭ್ಯಗಳಡಿ 10,32,601 ಫಲಾನುಭವಿಗಳಿಗೆ ರೂ. 1183.19 ಕೋಟಿಗಳಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ. ಮಾಹಿತಿಯನ್ನು <u>ಅನುಬಂಧ- 1 ರಲ್ಲಿ</u> ಒದಗಿಸಿದೆ.<br><br>**2) ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:**<br><br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿವತಿಯಿಂದ ಸಂಘಟಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಕಲ್ಯಾಣ ಯೋಜನೆಗಳಡಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ.<br>2) ಕಾರ್ಮಿಕರಿಗೆ ವೈದ್ಯಕೀಯ ನೆರವು.<br>3) ಕಾರ್ಮಿಕರಿಗೆ ಅಪಘಾತ ಧನ ಸಹಾಯ.<br>4) ಹೆರಿಗೆ ಭತ್ಯೆ ಸೌಲಭ್ಯ.<br>5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ.<br>6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ.<br>7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ.<br><br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಲ್ಯಾಣ ಯೋಜನೆಗಳಡಿ ಇಲ್ಲಿಯವರೆಗೆ ರೂ. 48.86 ಕೋಟಿಗಳು ವೆಚ್ಚವಾಗಿದ್ದು, ವಿವರಗಳನ್ನು **<u>ಅನುಬಂಧ- 2 ರಲ್ಲಿ</u> ಒದಗಿಸಿದೆ.** ಉಳಿಕೆ ಮೊತ್ತವನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲಾಗಿದೆ. |

| | | |
|---|---|---|
| ಇ) | ಈ ಯೋಜನೆಗಳಲ್ಲಿ ಸಾಕಷ್ಟು ದುರುಪಯೋಗಗಳು ಆಗುತ್ತಿದ್ದು, ಈ ಸೌಲಭ್ಯಗಳನ್ನು ಕಾರ್ಮಿಕರಿಗೆ ಸಕಾಲದಲ್ಲಿ ತಲುಪುತ್ತಿಲ್ಲವೆಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಸಂಬಂದ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? | 1) **ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಈ ಮಂಡಳಿಯ ಯೋಜನೆಗಳನ್ನು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಹಾಗೂ ಕಾರ್ಮಿಕ ನಿರೀಕ್ಷಕರ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿಯೊಂದು ಯೋಜನೆಯಲ್ಲಿ ಧನಸಹಾಯವನ್ನು ಪಡೆಯಲು ಅರ್ಹತೆಗಳನ್ನು ಹಾಗೂ ಮಾನದಂಡಗಳನ್ನು ನಿಯಮಗಳಲ್ಲಿ ರೂಪಿಸಲಾಗಿರುತ್ತದೆ. ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಈ ಎಲ್ಲಾ ಯೋಜನೆಗಳಿಗೆ ಸೇವಾ ಸಿಂಧು ತಂತ್ರಾಂಶದಲ್ಲಿ ಆನ್ ಲೈನ್ ಮೂಲಕ ಅರ್ಜಿಯನ್ನು ಸ್ವೀಕರಿಸಿ ಮಾನದಂಡಗಳಿಗೆ ಅನುಗುಣವಾಗಿರುವ ಅರ್ಜಿಗಳನ್ನು ಮಾತ್ರ ಪುರಸ್ಕರಿಸಲಾಗಿರುತ್ತದೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸೇವಾ ಸಿಂಧು ತಂತ್ರಾಂಶದ ಮೂಲಕ ನೀಡಲಾಗುತ್ತಿರುವ ಯೋಜನೆಗಳನ್ನು ಸಕಾಲ ಯೋಜನೆಯಡಿಯಲ್ಲಿ ಇಂಟಿಗ್ರೇಟ್ ಮಾಡಲಾಗಿದ್ದು, ಕಾಯ್ದೆಯಲ್ಲಿ ನಿಗದಿ ಪಡಿಸಿರುವ ಕಾಲಮಿತಿ ಅನ್ವಯ ಅರ್ಜಿಗಳನ್ನು ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.<br>2) **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:**<br>ಈ ಮಂಡಳಿಯ ವತಿಯಿಂದ ಸಂಘಟಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ಸಕಾಲದಲ್ಲಿ ನೀಡಲಾಗುತ್ತಿದ್ದು, ಯಾವುದೇ ದುರುಪಯೋಗದ ಪ್ರಕರಣಗಳು ಕಂಡು ಬಂದಿರುವುದಿಲ್ಲ. |

**ಕಾಇ 67 ಎಲ್‌ಇಟಿ 2022**

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

# <u>ಅನುಬಂಧ– 1</u>

## <u>ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 224</u>

<u>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ</u> 2007 ರಿಂದ ಡಿಸೆಂಬರ್–2021 ರವರೆಗೆ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿಯಲ್ಲಿ ವಿತರಿಸಲಾದ ವರ್ಷವಾರು ಸಾಧನೆಯ ವಿವರ

| ಸೌಲಭ್ಯಗಳ ವಿವರ | 2007–08 ರಿಂದ 2012–13 ರವರೆಗೆ | | 2013–14 ರಿಂದ 2017–18 ರವರೆಗೆ | | 2018–19 ರಿಂದ 2019–20 ರವರೆಗೆ | | 2020–21 | | 2021–2022 | | ಒಟ್ಟು | |
|---|---|---|---|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಶೈಕ್ಷಣಿಕ ಧನಸಹಾಯ | 10,896 | 27,679,600 | 227,489 | 1,038,126,292 | 221,040 | 1,258,068,282 | 115,538 | 869,366,430 | 134,022 | 1,365,061,609 | 708,985 | 4,558,302,21[illegible] |
| ಮದುವೆ ಧನಸಹಾಯ | 2,126 | 15,160,000 | 23,514 | 1,161,415,000 | 22,346 | 929,471,000 | 16,183 | 419,730,000 | 20,937 | 845,489,000 | 85,106 | 3,371,265,0[illegible] |
| ಅಂತ್ಯ ಸಂಸ್ಕಾರಕ್ಕೆ ವೆಚ್ಚ | 1,376 | 20,921,000 | 6,368 | 328,454,619 | 5,882 | 315,923,000 | 3,342 | 180,706,000 | 4,504 | 243,072,300 | 21,472 | 1,089,076,91[illegible] |
| ಪ್ರಮುಖ ವೈದ್ಯಕೀಯ | 233 | 8,104,269 | 2,272 | 63,982,540 | 1,308 | 35,497,780 | 1,235 | 46,700,314 | 1,502 | 73,169,290 | 6,550 | 227,454,193 |
| ಅಪಘಾತ ಪರಿಹಾರ | 195 | 14,777,740 | 185 | 25,574,260 | 174 | 45,738,000 | 129 | 22,059,000 | 152 | 34,819,500 | 835 | 142,968,500 |
| ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಮರಣ ಪರಿಹಾರ | 0 | 0 | 0 | 0 | 0 | 0 | 14 | 2,900,000 | 12 | 2,800,000 | 26 | 5,700,000 |
| ಹೆರಿಗೆಧನ ಸಹಾಯ | 365 | 2,192,000 | 1,677 | 24,721,500 | 1,124 | 21,090,174 | 81 | 1,650,000 | 350 | 8,655,000 | 3,597 | 58,308,674 |
| ವೈದ್ಯಕೀಯ ವೆಚ್ಚ | 779 | 742,750 | 268 | 565,048 | 287 | 7,612,255 | 212 | 2,530,550 | 294 | 2,170,625 | 1,840 | 13,621,228 |
| ಉಪಕರಣ ಖರೀದಿಗೆ ಸಾಲ | 3 | 14,890 | 17 | 85,000 | 0 | 0 | 0 | 0 | | | 20 | 99,890 |
| ಪಿಂಚಣಿ ಸೌಲಭ್ಯ | 0 | 0 | 759 | 9,131,000 | 1,147 | 35,078,000 | 643 | 28,624,000 | 3,133 | 32,345,000 | 5,682 | 105,178,000 |
| ದುರ್ಬಲತೆ ಪಿಂಚಣಿ | 0 | 0 | 11 | 1,608,000 | 23 | 4,213,000 | 5 | 1,290,000 | 96 | 5,005,000 | 135 | 12,116,000 |

| | | | | | | | | | | | | |
|---|---|---|---|---|---|---|---|---|---|---|---|---|
| ಕುಟುಂಬ ಪಿಂಚಣಿ | 0 | 0 | 0 | 0 | 0 | 0 | 5 | 24,000 | 7 | 44,000 | 12 | 68,000 |
| ಅನಿಲ ಭಾಗ್ಯ | 0 | 0 | 0 | 20,000,000 | 4,055 | 0 | 0 | 0 | | | 4,055 | 20,000,000 |
| ಶ್ರಮ ಸಾಮರ್ಥ್ಯ | 0 | 0 | 1,854 | 83,995,481 | 3,780 | 147,143,192 | 40,385 | 57,147,550 | 70,645 | 313,972,961 | 116,664 | 602,259,184 |
| ಬಿಎಂಟಿಸಿ ಬಸ್ ಪಾಸ್ | 0 | 0 | 0 | 52,479,000 | 4,598 | 594,300 | 50,969 | 594,939,450 | 12,581 | 155,059,800 | 68,148 | 803,072,550 |
| ವಸತಿ ಸೌಲಭ್ಯ | 0 | 0 | 0 | 0 | 5,129 | 760,000,000 | 0 | 0 | | | 5,129 | 760,000,000 |
| ಶಿಶು ಪಾಲನಾ ಕೇಂದ್ರಗಳ ಸ್ಥಾಪನೆ | 0 | 0 | 0 | 0 | 501 | 3,000,000 | 218 | 5,763,296 | 3,350 | 52,042,887 | 4,069 | 60,806,183 |
| ತಾಯಿ ಮಗು ಸಹಾಯ ಹಸ್ತ | 0 | 0 | 0 | 0 | 0 | 0 | 27 | 162,000 | 249 | 1,494,000 | 276 | 1,656,000 |
| ಒಟ್ಟು | 15,973 | 89,592,249 | 264,414 | 2,810,137,740 | 271,394 | 3,563,428,983 | 228,986 | 2,233,592,590 | 251,834 | 3,135,200,972 | 1,032,601 | 11,831,952,534 |

ಅನುಬಂಧ-2

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 224

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರಿಂದ ಸಂಗ್ರಹವಾಗಿರುವ ವಂತಿಕೆ ಮೊತ್ತ ಮತ್ತು ವೆಚ್ಚದ ವಿವರಗಳು

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ವರ್ಷ | ಕಾರ್ಮಿಕರು & ಮಾಲೀಕರಿಂದ ಸಂಗ್ರಹವಾದ ವಂತಿಕೆ ಮೊತ್ತ | ಸರ್ಕಾರದಿಂದ ಬಿಡುಗಡೆಯಾದ ವಂತಿಕೆ ಮೊತ್ತ | ಸಂಗ್ರಹವಾಗಿರುವ ಒಟ್ಟು ವಂತಿಕೆ ಮೊತ್ತ | ಖರ್ಚಾಗಿರುವ ಮೊತ್ತ |
|---|---|---|---|---|---|
| 1 | 2006-07 | 1.32 | 0 | 1.32 | 0 |
| 2 | 2007-08 | 1.57 | 0 | 1.57 | 0.16 |
| 3 | 2008-09 | 1.72 | 1.00 | 2.72 | 0.38 |
| 4 | 2009-10 | 1.79 | 0.24 | 2.03 | 0.88 |
| 5 | 2010-11 | 1.96 | 0.25 | 2.21 | 0.36 |
| 6 | 2011-12 | 4.08 | 0.25 | 4.33 | 1.03 |
| 7 | 2012-13 | 4.38 | 1.00 | 5.38 | 1.28 |
| 8 | 2013-14 | 4.95 | 1.37 | 6.32 | 1.02 |
| 9 | 2014-15 | 5.79 | 2.57 | 8.36 | 2.18 |
| 10 | 2015-16 | 5.94 | 2.25 | 8.19 | 1.65 |
| 11 | 2016-17 | 6.44 | 2.40 | 8.84 | 2.71 |
| 12 | 2017-18 | 20.63 | 6.00 | 26.63 | 7.28 |
| 13 | 2018-19 | 23.40 | 5.00 | 28.40 | 8.75 |
| 14 | 2019-20 | 24.75 | 7.18 | 31.96 | 10.69 |
| 15 | 2020-21 | 24.75 | 6.00 | 30.75 | 6.28 |
| 16 | 2021-22 | 24.22 | 4.50 | 28.72 | 4.21 |
| | ಒಟ್ಟು | 157.69 | 40.01 | 197.73 | 48.86 |